





ಆಲ್‌ಫ್ರೆಡ್ ಪ್ಯಾರಿಸ್ ಬಿಟ್ಟು ಇಟಲಿಯ ಸ್ಯಾನ್ ರೆಮೋಗೆ ಹೋಗಿ ನೆಲೆಸಿ, ಅಲ್ಲಿ ತನ್ನ ಉದ್ದಿಮೆಯನ್ನು ಪ್ರಾರಂಭಿಸಿದ. ಅವನು ಅಲ್ಲಿಯೇ 1896ರ ಡಿಸೆಂಬರ್ 10ರಂದು ನಿಧನನಾದ. ನೊಬೆಲ್ ಬಹುಮಾನಗಳನ್ನು ಇಂದಿಗೂ ಅದೇ ದಿನ ವಿತರಣೆ ಮಾಡಲಾಗುತ್ತವೆ (ಶಾಂತಿ ಬಹುಮಾನ ಹೊರತುಪಡಿಸಿ).

ಆಲ್‌ಫ್ರೆಡ್ ಶ್ರೀಮಂತನಾದರೂ ಅವನು ಸತ್ತಾಗ ಯಾವ ಬಂಧುವೂ ಜೊತೆಯಲ್ಲಿ ಇರಲಿಲ್ಲ. ಅವನನ್ನು ಸುತ್ತುವರೆದಿದ್ದವರು ಅವನ ಸೇವಕರು. ಯೂರೋಪ್‌ನ ಐದಾರು ಭಾಷೆಗಳಲ್ಲಿ ಸಲೀಸಾಗಿ ಮಾತನಾಡುತ್ತಿದ್ದ ಆತನಿಗೆ ಸಾವಿನ ಸಂದರ್ಭದಲ್ಲಿ ಸ್ವೀಡಿಷ್ ಬಿಟ್ಟು ಮತ್ತೇನೂ ಮಾತನಾಡಲಾಗುತ್ತಿರಲಿಲ್ಲ. ಪಾರ್ಶ್ವವಾಯು ಪರಿಣಾಮದಿಂದ ಮಾತೃಭಾಷೆಯನ್ನು ಬಿಟ್ಟು ಉಳಿದ ಭಾಷೆಗಳು ಸ್ಮೃತಿಪಟಲದಲ್ಲಿ ನಿಷ್ಕ್ರಿಯವಾಗಿದ್ದವು. ಸಾಯುವ ಸಮಯದಲ್ಲಿ ಆತ ಹೇಳಿದ ಮಾತುಗಳು ಯಾರಿಗೂ ಅರ್ಥವಾಗಲಿಲ್ಲ. ಸಮೀಪವಿದ್ದ ಸೇವಕರಿಗೆ ತಿಳಿದ ಏಕೈಕ ಪದ, 'ಟೆಲಿಗ್ರಾಂ'. ಹೀಗಾಗಿ ಸೇವಕರು ನೊಬೆಲ್‌ನ ಬಂಧುಗಳಿಗೆ ಟೆಲಿಗ್ರಾಂ ಮೂಲಕ ಸುದ್ದಿ ತಿಳಿಸಿದರು.

ತನ್ನ ಉಯಿಲನ್ನು ಜಾರಿಗೆ ತರಲು ಆಲ್‌ಫ್ರೆಡ್ ತನ್ನ ಸಹಾಯಕರಾದ ರಗ್ನಾರ್ ಸೋಲ್‌ಮನ್ ಮತ್ತು ರುಡಾಲ್ಫ್ ಲಿಲೆಂಗ್ವಿಸ್ಟ್ ಅವರುಗಳನ್ನು ನೇಮಿಸಿದ್ದ. ಅವರಿಬ್ಬರ ಜೊತೆಗೆ ಹೆಗಲೆಣೆಯಾಗಿ ಶ್ರಮಿಸಿದ್ದು, ಆಲ್‌ಫ್ರೆಡ್ ಅಣ್ಣ ಲುಡ್ವಿಗ್‌ನ ಮಗ ಎಮಾನ್ಯುಯೆಲ್.

ಉಯಿಲನ್ನು ಕಂಡ ಬಂಧುಗಳು ಕುಪಿತರಾಗಿ ಕೋರ್ಟ್ ಮೊರೆಹೊಕ್ಕರು. ಸ್ವೀಡನ್ನಿನ ರಾಜ ಕಿಡಿಕಾರಿದ. ನೆರೆಯ ರಾಷ್ಟ್ರವಾದ ನಾರ್ವೆ 'ಶಾಂತಿ ಬಹುಮಾನ'ವನ್ನು ನಿರ್ಧರಿಸುವುದು ದೇಶದ್ರೋಹವೆಂದು ಬಗೆದ. ಒಂದು ಪತ್ರಿಕೆ 'ನೊಬೆಲ್ಲೂ ಬೇಡ, ಅವನ ಮಿಲಿಯಗಟ್ಟಲೆ ಹಣವೂ ಬೇಡ' ಎಂದು ಬರೆಯಿತು. ಹಲವು ಪತ್ರಿಕೆಗಳು 'ನೊಬೆಲ್ ದೇಶದ್ರೋಹಿ' ಎಂದು ಅವನನ್ನು ಖಂಡಿಸಿದವು. ಒಂದು ಪತ್ರಿಕೆ ಮಾತ್ರ, 'ಇದು ನಮ್ಮ ಸಂಸ್ಕೃತಿಯ ಚರಿತ್ರೆಯಲ್ಲಿ ನಡೆದುಹೋದ ಒಂದು ಅತಿ ಮಹತ್ವದ ಘಟನೆ' ಎಂದು ಅವನನ್ನು ಕೊಂಡಾಡಿತು.

ಬಹುಮಾನಿತರನ್ನು ಆಯ್ಕೆಮಾಡಲು ನೊಬೆಲ್ ಕೆಲವು ಸಂಸ್ಥೆಗಳನ್ನು ಹೆಸರಿಸಿದ್ದ. ಶಾಂತಿ ಪ್ರಶಸ್ತಿಗೆ ನಿಯೋಜಿತವಾಗಿದ್ದ ನಾರ್ವೆಯ ಸಂಸ್ಥೆಯೊಂದರ ಹೊರತು, ಮಿಕ್ಕ ಸಂಸ್ಥೆಗಳು 'ಇದು ನಮ್ಮಿಂದಾಗದ ಕೆಲಸ' ಎಂದು ಕೈತೊಳೆದುಕೊಂಡವು. 'ಸರಿಯಾದ ದಿಕ್ಕಿನಲ್ಲಿ ಅತ್ಯುತ್ತಮ ಕೃತಿಯನ್ನು ರಚಿಸಿರುವರಿಗೆ ನೀಡತಕ್ಕದ್ದು' ಎಂದು ಸಾಹಿತ್ಯ ಕ್ಷೇತ್ರದ ಆಯ್ಕೆಯ ಬಗ್ಗೆ ನೊಬೆಲ್ ತನ್ನ ಉಯಿಲಿನಲ್ಲಿ ಸೂಚಿಸಿದ್ದ. ಆಯ್ಕೆ ಮಾಡಬೇಕಾಗಿದ್ದ ಸಂಸ್ಥೆ – 'ಸರಿಯಾದ ದಿಕ್ಕು ಎಂದರೆ ಏನು? ಅದನ್ನು ಯಾರು ನಿರ್ಧರಿಸುತ್ತಾರೆ?' ಎಂದು ಕೇಳಿತು. ಹೀಗೆ ಪ್ರತಿಯೊಬ್ಬರೂ ಒಂದಲ್ಲ ಒಂದು ತಕರಾರು ಎತ್ತಿದರು.

ನೊಬೆಲ್ ಉಯಿಲು ಜಾರಿಗೊಳಿಸಲು ಟೊಂಕ ಕಟ್ಟಿ ನಿಂತ ಮೂವರು ದೇಶದಿಂದ ದೇಶಕ್ಕೆ, ಕಚೇರಿಯಿಂದ ಕಚೇರಿಗೆ, ನ್ಯಾಯಾಲಯದಿಂದ ನ್ಯಾಯಾಲಕ್ಕೆ ಐದು ವರ್ಷಗಳ ಕಾಲ ಅಲೆದಾಡಿದರು. ಪ್ರಾಣಭಯವೂ ಅವರನ್ನು ಕಾಡಿತು. ಅಂತೂ ಕಡೆಗೆ 1900ರ ಜೂನ್ 29ರಂದು ನೊಬೆಲ್ ಪ್ರಶಸ್ತಿ ಊರ್ಜಿತವಾಯಿತು. ಸೋಲ್‌ಮನ್ ಮತ್ತು ಆತನ ಗೆಳೆಯರು ತಮ್ಮ ಕೆಲಸದಲ್ಲಿ ಸೋತಿದ್ದರೆ ಪ್ರಾಯಶಃ ನೊಬೆಲ್ ಬಹುಮಾನವೇ ರೂಪುಗೊಳ್ಳುತ್ತಿರಲಿಲ್ಲ. ಹಾಗೆಯೇ ಫ್ರೆಂಚ್ ಪತ್ರಿಕೆ ನಿಧನದ ಸುದ್ದಿಯನ್ನು ತಪ್ಪಾಗಿ ಪ್ರಕಟಿಸದೆ ಹೋಗಿದ್ದರೂ, ಪ್ರಶಸ್ತಿ ಸ್ಥಾಪಿಸುವ ವಿಚಾರ ನೊಬೆಲ್ ಮನಸ್ಸಿಗೆ ಬರುತ್ತಿರಲಿಲ್ಲ.

ಮೊಟ್ಟಮೊದಲ ನೊಬೆಲ್ ಬಹುಮಾನ ಗಳಿಸಿದಾತ, ಎಕ್ಸ್‌ರೆ ಕಂಡುಹಿಡಿದ ಜರ್ಮನಿಯ ಎಂಜಿನಿಯರ್–ವಿಜ್ಞಾನಿ ವಿಲ್ಹೆಮ್ ರಾಂಟ್‌ಜೆನ್. ಭೌತಶಾಸ್ತ್ರ ವಿಭಾಗದಲ್ಲಿ 1901ರ ಬಹುಮಾನವನ್ನು ಆತನಿಗೆ ನೀಡಲಾಯಿತು. 'ಸ್ವೀಡನ್ನಿನಲ್ಲಿ ತುಂಬಾ ಚಳಿ, ನಾನು ಕಾಲೇಜಿನಲ್ಲಿ ಪಾಠಮಾಡಬೇಕು' ಇತ್ಯಾದಿ ಕಾರಣಗಳನ್ನು ನೀಡಿ ಆತ ಬಹುಮಾನವನ್ನು ಮೊದಲು ನಿರಾಕರಿಸಿದ. ಆದರೆ ಮಿಕ್ಕವರು ನೀಡಿದ ಬುದ್ಧಿವಾದವನ್ನು ಕಡೆಗಣಿಸಲಾಗದೆ ಬಹುಮಾನವನ್ನು ಸ್ವೀಕರಿಸಿದ. ದೊರೆತ ಹಣವನ್ನು ರಾಂಟ್‌ಜೆನ್ ತನ್ನ ವಿಶ್ವವಿದ್ಯಾಲಯಕ್ಕೆ ದೇಣಿಗೆ ಕೊಟ್ಟನಲ್ಲದೇ, ಎಕ್ಸ್‌ರೆ ಸಂಶೋಧನೆಗೆ ಪೇಟೆಂಟ್ ಪಡೆಯಲಿಲ್ಲ. ಮೇರಿ ಕ್ಯೂರಿ ಕೂಡ, 'ವಿಜ್ಞಾನ ಎಲ್ಲರ ಸ್ವತ್ತು. ಅದಕ್ಕೆ ಸಂಬಂಧಿಸಿದ ಹಾಗೆ ಪೇಟೆಂಟ್ ಪಡೆಯುವುದು ತರವಲ್ಲ' ಎಂದು ತಮ್ಮ ಶೋಧನೆಗಳಿಗೆ ಪೇಟೆಂಟ್ ಪಡೆಯಲಿಲ್ಲ. ವಿಪರ್ಯಾಸವೆಂದರೆ, ರಾಂಟ್‌ಜೆನ್ ಸತ್ತಾಗ ಭಿಕಾರಿಯಾಗಿದ್ದ.

ನೊಬೆಲ್ ಪ್ರಶಸ್ತಿ ಬಗ್ಗೆ ಮೊದಲು ಕಿಡಿಕಾರಿದ ಸ್ವೀಡನ್ ದೇಶದ ರಾಜನ ಮಕ್ಕಳು, ಮೊಮ್ಮಕ್ಕಳು ನಂತರ ತಮ್ಮ ನಿಲುವು ಬದಲಿಸಿಕೊಂಡರು. ಈಗಲೂ ಅವರ ಕುಟುಂಬದವರು ಪ್ರತಿ ವರ್ಷ ಡಿ.